**<u>ಅಪರ ಸಿವಿಲ್ ನ್ಯಾಯಾಧೀಶು ಮತ್ತು ಜೆಎಂಎಫ್‌ಸಿ ನ್ಯಾಯಾಲಯ,</u>**

**<u>ಚಿಂತಾಮಣಿ</u>**

**ಸಿ.ಎಂ.ಸಿ.2048/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಅಮೃತಾ** | | |
| **ಗಂಡನ ಹೆಸರು** | **ಸುಪ್ರೀತ್** | **PW** 1 | |
| **ವಯಸ್ಸು** | **27 ವರ್ಷ** | | |
| **ಉದ್ಯೋಗ** | **ವ್ಯವಸಾಯ** | **ಪ್ರಮಾಣ ವಚನ ,** | |
| **ವಾಸ ಸ್ಥಳ** | **ಗುಡಿಸಲಹಳ್ಳಿ ಗ್ರಾಮ** | **ಭೋದಿಸಿದ ದಿನಾಂಕ** | 15-12-2022 |

**<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**
**<u>ಮುಖ್ಯ ವಿಚಾರಣೆಃ ಶ್ರೀ.ಎನ್.ವಿ.ಆರ್. ಅರ್ಜಿದಾರರ ಪರ ವಕೀಲರಿಂದಃ</u>**

ದಿನಾಂಕಃ15.03.2021 ರಂದು ನನ್ನ ಮದುವೆಯನ್ನು ಎದುರುದಾರನೊಂದಿಗೆ ಶ್ರೀ.ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನ ಸನ್ನಿಧಿ, ಆಲಂಬಗಿರಿ ಗ್ರಾಮ, ಚಿಂತಾಮಣಿ ತಾಲ್ಲೂಕುನಲ್ಲಿ ಹಿಂದೂ ಸಂಪ್ರದಾಯದಂತೆ ಗುರು ಹಿರಿಯರ ಸಮಕ್ಷಮ ನನ್ನ ತಂದೆ ತಾಯಿ ವಿಜೃಂಭಣೆಯಿಂದ ಮದುವೆ ಮಾಡಿಕೊಟ್ಟಿದ್ದರು. ನನ್ನ ತಂದೆ ತಾಯಿ ನನಗೆ ಒಂದು ಲ್ಯಾಂಗ್ ಚೈನು, ಕಿವಿ ಸೆಟ್, ಹುಡುಗನಿಗೆ ಒಂದು ಕತ್ತಿನ ಚೈನು, ಬ್ರಾಸ್ಲೆಟು, ಒಂದು ಉಂಗುರ ಕೊಟ್ಟಿರುತ್ತಾರೆ.

ಮದುವೆಯಾದ ನಂತರ ನಾನು ನನ್ನ ಗಂಡನ ಜೊತೆ 7-8 ತಿಂಗಳುಗಳ ಕಾಲ ಚೆನ್ನಾಗಿ ಇದ್ದೆ. ನನ್ನ ಗಂಡ ಪ್ರತಿದಿನ ಕುಡಿದು ಬಂದು ನನಗೆ ಹಿಂಸೆ ನೀಡುತ್ತಿದ್ದ. ತವರು ಮನೆಯಿಂದ ದುಡ್ಡನ್ನು ತೆಗೆದುಕೊಂಡು ಬಾ ಎಂದು ಹೇಳಿ ಕಿರುಕುಳ ನೀಡುತ್ತಿದ್ದ. ನನಗೆ ಊಟವನ್ನು ಕೊಡದೇ ಹಿಂಸೆ ನೀಡಿ ಮನೆಯಿಂದ ಆಚೆ ಹಾಕಿರುತ್ತಾನೆ. ಒಂದು ದಿನ ರಾತ್ರಿ 9.30 ಗಂಟೆಯ ಸಮಯದಲ್ಲಿ ನನ್ನ ಗಂಡ ಕುಡಿದು ಬಂದು ನನ್ನನ್ನು ಆಚೆ ಇಟ್ಟು ನಿನ್ನ ತವರು ಮನೆಯಿಂದ ಹಣ

ತೆಗೆದುಕೊಂಡ ಬಾ ಎಂದು ಕಿರುಕುಳ ನೀಡಿ, ವಿಷಯವನ್ನು ತಂದು ನೀನು ಇದನ್ನು ಕುಡಿಯಬೇಕು ಎಂದು ತುಂಬಾ ಹಿಂಸೆ ಕೊಟ್ಟಿರುತ್ತಾರೆ. ನಂತರ ನನ್ನನ್ನು ತವರು ಮನೆಗೆ ಕಳುಹಿಸಿರುತ್ತಾರೆ.

ನನ್ನ ಗಂಡ ವ್ಯವಸಾಯ ಮತ್ತು ವ್ಯಾಪಾರ ಮಾಡುತ್ತಿದ್ದಾನೆ. ನನ್ನ ಗಂಡ ಪ್ರತಿತಿಂಗಳು 1 ಲಕ್ಷ ರೂ. ದುಡಿಯುತ್ತಿದ್ದಾನೆ. ನನ್ನ ಗಂಡ ರೇಷ್ಮೆ ಹುಳು ಮೇಯಿಸುತ್ತಾನೆ, ಅದರಿಂದ ಹೆಚ್ಚು ಆದಾಯ ಬರುತ್ತದೆ. ಈಗ ನನ್ನ ಗಂಡನ ಆಶ್ರಯವಿಲ್ಲದೇ ನನಗೆ ಬದುಕಲು ಆಗುವುದಿಲ್ಲ. ನನ್ನ ತಂದೆ ತಾಯಿ ವ್ಯವಸಾಯ ಮಾಡುತ್ತಾರೆ. ನನ್ನ ತಂದೆ ತಾಯಿ ಆರೋಗ್ಯವಾಗಿ ಇದ್ದಾರೆ. ನನ್ನ ಗಂಡನಿಂದ ನನಗೆ 30,000/– ರೂ. ಜೀವನಾಂಶ ಬೇಕು.

ಈ ಕೆಳಕಂಡ ದಾಖಲಾತಿಗಳನ್ನು ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ಈ ಕೆಳಕಂಡಂತೆ ನಿಶಾನೆಗೊಳಿಸಲಾಯಿತು.

| **ನಿಶಾನೆ** | **ಪತ್ರಗಳು** |
|---|---|
| ನಿಪಿ1<br>ಮತ್ತು<br>ನಿಪಿ 2 | ಮದುವೆಯ ಆಮಂತ್ರಣ ಪತ್ರಿಕೆಗಳು |

**ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಸಮಯ ಕೋರಿದ್ದು ಸಮಯವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)** **ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚಿಂತಾಮಣಿ.